ರೋಸಿಹೋಗಿತ್ತು. ಮತ್ತೆ ಮತ್ತೆ ತೋರಿಸಲು ನನ್ನ ಸೀರೆಯನ್ನು ಕೇಳಿದಾಗ– 'ನಿಮ್ಮ ಪ್ರದರ್ಶನವೆಲ್ಲ ಮುಗಿದ ಮೇಲೆ ಕೊಡಿ' ಎಂದು ಸಿಟ್ಟಿನಿಂದ ಅತ್ತೆಯ ಮುಂದಿಟ್ಟು ಒಳಗೆ ಹೋದೆ. ಬಂದವರೆದುರಿಗೆ ನನ್ನ ಈ ವರ್ತನೆ ಯಾರಿಗೂ ಹಿಡಿಸಲಿಲ್ಲ. ನನ್ನ ಗಂಡನಿಗೂ ಸರಿ ಎನಿಸಲಿಲ್ಲ. ಅವರು ಒಳಗೆ ಬಂದು – 'ಏನಾಗಿದೆ ನಿನಗೆ? ಮನೆಗೆ ಬಂದವರೆದುರಿಗೆ ಹೀಗಾ ನಡೆದುಕೊಳ್ಳುವುದು?' ಎಂದರು. ನನಗೂ ಸುಮ್ಮನಿರಲಾಗಲಿಲ್ಲ. ನನ್ನ ಅಷ್ಟು ದಿನಗಳಿಂದ ತಡೆದುಕೊಂಡ ಆಕ್ರೋಶ ಹೊರ ಹಾಕಿದೆ. 'ನೀವೆಲ್ಲ ಸೀಮಾ ಏನೇ ಮಾಡಿದರೂ ಹಾಡಿ ಹೊಗಳುತ್ತೀರಿ. ನಾನು ಈ ಮನೆಗಾಗಿ ಹತ್ತು–ಹನ್ನೆರಡು ವರ್ಷಗಳಿಂದ ದುಡಿಯುತ್ತಿದ್ದೇನೆ. ನಿಮಗೆ ಅದರ ಬೆಲೆಯ ಅರಿವು ಇಲ್ಲ. ಮದುವೆಯಾದ ಮೇಲೆ ನಾಲ್ಕು ದಿನ ಹನಿಮೂನಿಗೆಂದು ಹೋದದ್ದಷ್ಟೇ. ಆ ಮೇಲೆ ಉಸಿರಾಡಲೂ ಪುರಸೊತ್ತಿಲ್ಲ. ಕುಮುದಳ ಮದುವೆ, ಸುರೇಶನ ಓದು, ಅತ್ತೆಯ ಆಪರೇಶನ್, ಮಾವನ ಕಾಯಿಲೆ ಒಂದಲ್ಲ ಒಂದು ತಾಪತ್ರಯ. ನನ್ನ ಆಶೆ–ಆಕಾಂಕ್ಷೆಗಳನ್ನೆಲ್ಲ ಹತ್ತಿಕ್ಕಿ ದುಡಿದರೂ ಒಬ್ಬರ ಬಾಯಿಯಿಂದಲೂ ಒಂದು ಸಾಂತ್ವನದ ಮಾತಿಲ್ಲ. ನಿಮಗೆಲ್ಲ ಪುಕ್ಕಟೆಯಾಗಿ ಒಬ್ಬ ಕೆಲಸದವಳು ಸಿಕ್ಕಂತಾಗಿದೆ. ನಾನು ನನ್ನ ಕೆರಿಯರ್ ಬಗ್ಗೆ ಯೋಚಿಸಿದ್ದರೆ ಆಗ ತಿಳಿಯುತ್ತಿತ್ತು...' ಒಂದು ಗಂಟೆ ನಾನು ಅವರ ಮೇಲೆ ಕೂಗಾಡುತ್ತಲೇ ಇದ್ದೆ. ಅವರು ಶಾಂತವಾಗಿ ಕೇಳುತ್ತಿದ್ದರು. ನಡುವೆ ಒಂದು ಮಾತನ್ನೂ ಆಡಲಿಲ್ಲ. ನನ್ನ ಆವೇಶ ಕಡಿಮೆಯಾದ ಮೇಲೆ ಸಮಾಧಾನದಿಂದ– 'ನೋಡು ಪ್ರಭಾ, ನೀನು ಈ ಮನೆಗಾಗಿ ಎಷ್ಟು ಕಷ್ಟಪಟ್ಟಿರುವೆ ಎಂದು ನಮಗೆಲ್ಲರಿಗೂ ಗೊತ್ತು. ಅದಕ್ಕಾಗಿ ಎಲ್ಲರಿಗೂ ನಿನ್ನ ಬಗ್ಗೆ ಗೌರವವಿದೆ. ಆದರೆ ಅದನ್ನು ವ್ಯಕ್ತಪಡಿಸುವುದಿಲ್ಲ ಅಷ್ಟೇ. ಏನು ಮಾಡುವುದು. ಆಗಿನ ಪರಿಸ್ಥಿತಿಯೇ ಹಾಗಿತ್ತು. ಆದರೆ ಇನ್ನೊಂದು ಮಾತು, ನೀನು ಏನೇ ಮಾಡಿದರೂ ನಿನ್ನ ಕರ್ತವ್ಯವೆಂದು ಮಾಡುತ್ತೀ. ಅದರಲ್ಲಿ ಆತ್ಮೀಯತೆಯಾಗಲೀ, ಪ್ರೀತಿಯಾಗಲೀ ಇರುವುದಿಲ್ಲ.'

'ಹೌದು, ಹೌದು, ಸೀಮಾಳಂತೆ ಸಿಹಿಯಾಗಿ ಮಾತನಾಡಲೇನೂ ಕಾಸು ಕೊಡಬೇಕಾಗಿಲ್ಲ.'

'ನಾನೂ ಅದನ್ನೇ ಹೇಳುವುದು, ನಿನ್ನಿಂದ ಅದೇ ಆಗುವುದಿಲ್ಲವಲ್ಲ. ದಿನವಿಡೀ ಮುಖವನ್ನು ಊದಿಸಿಕೊಂಡೇ ಇರುತ್ತೀ. ದಿನವಿಡೀ ಕೆಲಸವನ್ನೇನೋ ಮಾಡುತ್ತೀ. ಆದರೆ ಅದನ್ನು ನಗು ನಗುತ್ತ ಮಾಡುವುದಿಲ್ಲ. ಸೀಮಾಳಿಗೆ ಸ್ನೇಹದಿಂದ ನಿನ್ನ ಸೀರೆಯನ್ನು ಉಡಲು ಕೊಡುವುದಿಲ್ಲ, ಅಪ್ಪನಿಗೆ ಆದರದಿಂದ ಊಟ ಬಡಿಸುವುದಿಲ್ಲ, ಅಮ್ಮನಿಗೆ ಪ್ರೀತಿಯಿಂದ ಒತ್ತಾಯ ಮಾಡಿ ಔಷಧಿ ಕೊಡುವುದಿಲ್ಲ, ಸುರೇಶನೊಡನೇ ನಗು ನಗುತ್ತ ಮಾತಾಡುವುದಿಲ್ಲ. ಇವೆಲ್ಲ ಸಣ್ಣ ವಿಷಯಗಳು ಪ್ರಭಾ. ಆದರೆ ಎಲ್ಲರ ಪ್ರೀತಿ ಆದರಗಳನ್ನು ಗೆಲ್ಲಲು ಇವೇ ಬೇಕಾಗುತ್ತವೆ. ಒಮ್ಮೊಮ್ಮೆ ನನಗೆನಿಸುತ್ತದೆ...'

'ಹೇಳಿ, ಏನೆನಿಸುತ್ತದೆ?'

